

# ಗಿನ್ನೆಸ್ ಬೆಕ್ಕು!

ಅಮೆರಿಕದ ಮಿಚಿಗನ್‌ನ ಫರ್ನಡೇಲ್‌ನಲ್ಲಿ ಸೈಗ್ನಸ್ ಎಂಬ ಹೆಸರುಳ್ಳ ಸಾಕು ಬೆಕ್ಕಿದೆ. ಇದರ ಬಾಲ ನೋಡುವುದೇ ಚಂದ. ಇದರ ಬಾಲ ಸುಮಾರು 44.66 ಸೆಂಟಿ ಮೀಟರ್ (17.58ಇಂಚು)ಗಳಷ್ಟು ಉದ್ದವಿದೆ. ತುಪ್ಪಳವೂ ಸೇರಿ 18.4 ಇಂಚುಗಳು. ಇಷ್ಟೊಂದು ಉದ್ದದ ಬಾಲವಿರುವ ಸಾಕು ಬೆಕ್ಕು ಜಗತ್ತಿನಲ್ಲಿ ಮತ್ಯಾವುದೂ ಇಲ್ಲವೆನ್ನುವುದೇ ಈ ಬೆಕ್ಕಿನ ಹೆಗ್ಗಳಿಕೆ. ಈ ಕಾರಣಕ್ಕಾಗಿಯೇ ಇದು ತನ್ನ ಹೆಸರನ್ನು ಗಿನ್ನೆಸ್ ದಾಖಲೆಯ ಪುಸ್ತಕದಲ್ಲಿ ಸೇರ್ಪಡೆಗೊಂಡಿದೆ.

'ಜಗತ್ತಿನ ಅತಿ ಉದ್ದ ಬಾಲವುಳ್ಳ ಸಾಕು ಬೆಕ್ಕು' ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಹೆಣ್ಣುಬೆಕ್ಕು ಲಾರೆನ್ ಹಾಗೂ ವಿಲ್ಪೊವರ್ಸ್ ದಂಪತಿಗಳ ನೆಚ್ಚಿನ ಸಾಕುಪ್ರಾಣಿಯಾಗಿದೆ. ನೋಡುಗರಿಗೆ ಉದ್ದನೆಯ ಕಸಬರಿಕೆಯಂತೆ ಕಾಣುವ ಇದರ ಬಾಲವೇ ಇದನ್ನು ಇಂದು ಜಗದ್ವಿಖ್ಯಾತವನ್ನಾಗಿ ಮಾಡಿದೆ. ಎರಡು ವರ್ಷ ಪ್ರಾಯದ ಸೈಗ್ನಸ್‌ನ ಬಾಲವು ಅದರ ದೇಹಕ್ಕಿಂತಲೂ ಉದ್ದವಾಗಿದೆ. ಪ್ರತೀ ತಿಂಗಳೂ ಅರ್ಧ ಇಂಚಿನಷ್ಟು ಉದ್ದ ಬೆಳೆಯುವ ಬಾಲದಿಂದಾಗಿ ಇದರ ದಾಖಲೆಯು ಮತ್ತೂ ವಿಸ್ತರಿಸುವ ಸಂಭವವಿದೆ. ಈ ಹಿಂದೆ ಸ್ಟಿವರ್ಟ್ ಗಿಲ್ಲಿಗನ್ ಎಂಬ ಬೆಕ್ಕು ತನ್ನ 16.3 ಇಂಚು ಉದ್ದದ ಬಾಲದಿಂದಾಗಿ ಇಂಥದ್ದೊಂದು ದಾಖಲೆಗೆ ಪಾತ್ರವಾಗಿತ್ತು.

ಈ ದಂಪತಿಯ ಮತ್ತೊಂದು ಖುಷಿ ಎಂದರೆ ಅವರು ಸಾಕಿರುವ ಆರ್ಕ್ಟುವರ್ಸ್ ಎಂಬ ಸವನ್ನಾ ಬೆಕ್ಕು ಸುಮಾರು 48.4 ಸೆಂಟಿಮೀಟರ್ (19ಇಂಚು)ಗಳಷ್ಟು ಉದ್ದವಿದ್ದು, 'ಜಗತ್ತಿನ ಅತಿ ಉದ್ದದ ಸಾಕುಬೆಕ್ಕು' ಎಂಬ ಹಿರಿಮೆಗೆ ಪಾತ್ರವಾಗಿದೆ. ಅದೂ ಸಹ ಗಿನ್ನೆಸ್ ದಾಖಲೆಗೆ ಪಾತ್ರವಾಗಿರುವುದು ಅವರ ಖುಷಿಯನ್ನು ಇಮ್ಮಡಿಗೊಳಿಸಿದೆ. ದಂಪತಿಯೇ ಹೇಳುವಂತೆ ಎರಡೂ ವಿಶ್ವದಾಖಲೆ ವೀರರು ಸದಾಕಾಲ ಜೊತೆಯಾಗಿಯೇ ಆಟವಾಡುತ್ತಾ ಸ್ನೇಹಿತರಂತೆ ಒಟ್ಟಿಗಿರುತ್ತಾರಲ್ಲದೇ ಮಲಗುವಾಗ ಎರಡೂ ಪರಸ್ಪರ ತಬ್ಬಿಕೊಂಡು ಮಲಗುತ್ತವೆಯಂತೆ.

ಬೆಕ್ಕುಗಳಿಗೆ ಸಂಬಂಧಿಸಿದ ಚಾರಿಟಿಯನ್ನು ಇವರು ನಡೆಸುತ್ತಿದ್ದು ಅದಕ್ಕಾಗಿ ಹಣ ಸಂಗ್ರಹಿಸುವ ಉದ್ದೇಶದಿಂದ ವಿಶ್ವ ಗಿನ್ನೆಸ್ ದಾಖಲೆಗಾಗಿ ಅರ್ಜಿ ಸಲ್ಲಿಸಿದ್ದರಂತೆ. ಎರಡೂ ಗಿನ್ನಿಸ್ ದಾಖಲೆಯಿಂದ ಪಡೆದ ಹಣವನ್ನು ಸಂಪೂರ್ಣವಾಗಿ ಫರ್ನಡೇಲ್ ಹಾಗೂ ಗ್ರೇಟರ್ ಮೆಟ್ರೋ ಡೆಟ್ರಾಯ್ಟ್ ಪ್ರದೇಶದಲ್ಲಿನ ಅನಾಥವಾದ, ಅಪಘಾತಗಳಲ್ಲಿ ಗಾಯಗೊಂಡ ಬೆಕ್ಕುಗಳ ಚಿಕಿತ್ಸೆ ಹಾಗೂ ಹಾರೈಕೆಗಾಗಿ ವಿನಿಯೋಗಿಸುವುದಾಗಿ ತಿಳಿಸಿದ್ದಾರೆ.

■ ಪ.ನಾ.ಹಳ್ಳಿ ಹರೀಶ್ ಕುಮಾರ್